ಅನುಬಂಧ—೧

೧೯೮೬-೮೭ನೇ ಸಾಲಿನಲ್ಲಿ ಶಿಕಾರಿಪುರ ತಾಲ್ಲೂಕಿನಲ್ಲಿ ಡಾಂಬರು ರಸ್ತೆ ಮಾಡಲು ಮಂಜೂರಾಗಿರುವ ಕೆಲಸಗಳು

	ರಸ್ತೆ ಶೀರ್ಷಿಕೆ	ರಸ್ತೆಯ ಹೆಸರು	ಮಂಜೂರಾಗಿರುವ ಅಂದಾಜು ಹಣ
			(ರೂಪಾಯಿಗಳು)
೧	೩೩೭ ರಸ್ತೆ ಮತ್ತು ಸೇತುವೆ (ಹಳ್ಳಿಗಳ ಪರಿಮಿತಿಯಲ್ಲಿ ಡಾಂಬರು ಹಾಕುವ ಕಾರ್ಯಕ್ರಮ)	ಹಿತ್ತಲ ಗ್ರಾಮದ ಪರಿಮಿತಿಯಲ್ಲಿ ಡಾಂಬರು ಮಾಡುವುದು	೫೦,೦೦೦
೨	—ಡಿಟೊ—	ಚಿಕ್ಕಜೋಗಿ ಹಳ್ಳಿ ಪರಿಮಿತಿಯಲ್ಲಿ ಡಾಂಬರು ಮಾಡುವುದು	೩೬,೦೦೦
೩	—ಡಿಟೊ—	ರನಸೋಗಿ ಗ್ರಾಮದ ಪರಿಮಿತಿಯಲ್ಲಿ ಡಾಂಬಾರು ಮಾಡುವುದು	೭೫,೦೦೦
೪	—ಡಿಟೊ—	ಮಳೂರು ಗ್ರಾಮದ ಪರಿಮಿತಿಯಲ್ಲಿ ಡಾಂಬರು ಮಾಡುವುದು	೭೫,೦೦೦
೫	—ಡಿಟೊ—	ಮಳವಳ್ಳಿ ಗ್ರಾಮದ ಪರಿಮಿತಿಯಲ್ಲಿ ಡಾಂಬರು ಮಾಡುವುದು	೩೦,೦೦೦
೬	೫೩೭ ರಸ್ತೆ ಮತ್ತು ಸೇತುವೆ	ಶಿಕಾರಿಪುರ ಜೋರಡಿ ರಸ್ತೆಯಲ್ಲಿ ಡಾಂಬರು ಮಾಡುವುದು	೧,೫೦,೦೦೦

ಕಾಪು ಕ್ಷೇತ್ರದ ಮಂದರಂಗಡಿ ಸರಕಾರಿ ಶಾಲೆಗೆ ಕಟ್ಟಡದ ಕೊರತೆ ಬಗ್ಗೆ

೧೦೭೪. ಶ್ರೀ ವಸಂತ ವಿ. ಸಲ್ಯಾನ (ಕಾಪು).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾಪು ಕ್ಷೇತ್ರದಲ್ಲಿರುವ ಮುದರಂಗಡಿ ಸರ್ಕಾರಿ ಶಾಲೆ ಪ್ರಾರಂಭವಾಗಿ ಎಷ್ಟು ವರ್ಷವಾಯಿತು ?

ಆ) ಸದರಿ ಶಾಲೆಗೆ ಕಟ್ಟಡ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿಯೇ ?

ಇ) ಹಾಗಿದ್ದಲ್ಲಿ ಈ ಕೊರತೆಯನ್ನು ಯಾವಾಗ ನಿವಾರಿಸಲಾಗುವುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ೧೯೭೮ರಲ್ಲಿ ಇಲ್ಲಿಗೆ ೮ ವರ್ಷ.

ಆ) ಬಂದಿದೆ.

ಇ) ಇದು ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುವುದರಿಂದಲೂ ೮೭-೮೮ನೇ ಸಾಲಿನಲ್ಲಿ ಕಟ್ಟಡ ನಿರ್ಮಾಣಕ್ಕೆ ಹಣ ಜಿಲ್ಲಾ ಪರಿಷತ್ತುಗಳಿಗೆ ನೇರವಾಗಿ ಒದಗಿಸಿರುವುದರಿಂದಲೂ, ಆವಶ್ಯಕತೆಗಳನ್ನು ನೇರವಾಗಿ ಜಿಲ್ಲಾ ಪರಿಷತ್ತಿನ ಗಮನಕ್ಕೆ ತಂದು ನಿರ್ಮಾಣಕ್ಕೆ ಹಣ ಪಡೆಯುಲು ಇಲಾಖೆಗೆ ಸೂಚಿಸಲಾಗುತ್ತಿದೆ.